# ಲಗಾವ

ಆ ಹುಡುಗಿ ನನ್ನ ಹಿಂದೆ ಬಿದ್ದಿದ್ದಾಳೆಂದು ಅರ್ಥವಾಗಲು ಹೆಚ್ಚು ಸಮಯವೇನೂ ಬೇಕಾಗಲಿಲ್ಲ. ಜೀವ ವಿಜ್ಞಾನದಲ್ಲಿ ಪಿಎಚ್.ಡಿ. ಮಾಡುತ್ತಿರುವವಳು, ವೈಜ್ಞಾನಿಕ ಸಂಶೋಧನಾ ಪ್ರಯೋಗಗಳಲ್ಲಿ, ಪ್ರಯೋಗಾಲಯಗಳಲ್ಲಿ ತೋರಿ ಬರುವಂತೆ ಕೌತುಕಮಯ ಕಣ್ಣುಗಳಿಂದ ಸೂಕ್ಷ್ಮಾಣುದರ್ಶಕಕ್ಕೆ ಕಣ್ಣಾಗಿ, ಅಲ್ಲಿ ಕಂಡ ಅಣು–ರೇಣುಗಳನ್ನು ಅದರ ಬಣ್ಣ ರೂಪು ರೇಖೆಗಳನ್ನು ತನ್ನ ಹೊತ್ತಗೆಗೆ ಬರೆದುಕೊಳ್ಳುತ್ತಾ, ನಡುನಡುವೆ ಟಿಪ್ಪಣಿ ಮಾಡಿಕೊಳ್ಳುತ್ತಾ, ಮಧ್ಯಾಹ್ನದ ಊಟದ ವಿರಾಮಕ್ಕೆ ತಾನು ತಂದ ಮನೆಯೂಟದ ಡಬ್ಬಿಯನ್ನು ಮೈಕ್ರೋವೇವಿನಲ್ಲಿರಿಸಿ ಬಿಸಿ ಮಾಡಿಕೊಂಡು ನನ್ನೊಡನೆಯೋ ಅಥವಾ ಅವಳ ಮತ್ತೋರ್ವ ಗೆಳತಿಯಾದ ಜಪಾನ್ ವಿದ್ಯಾರ್ಥಿನಿ ಮಿಯುಳ ಜೊತೆಗೋ ಹಂಚಿಕೊಂಡು ಊಟ ಮಾಡುತ್ತಾ... ನೋಡಲು ತೀರಾ ನಿರ್ಭಾವುಕಳಂತೆ ತೋರುವ ಅವಳ ಮುಖ ಕಣ್ಣಾಲಿಗಳಲ್ಲಿ ಈಚಿನ ದಿನಗಳಲ್ಲಿ ಹೊಸದೊಂದು ಮಿನುಗು ತುಟಿಯಂಚಲ್ಲಿ ಒಂದು ಬೆಡಗು ಮೂಡುತ್ತಿದ್ದುದು ಅವಳದೇ ವಿಂಗಿನಲ್ಲಿ ಪೋಸ್ಟ್‌ಡಾಕ್ಟೋರಲ್ ಮಾಡುತ್ತಿದ್ದ ನನ್ನನ್ನು ಕಂಡಾಗ ಮಾತ್ರ ಎಂದು ತೀವ್ರವಾಗಿ ಅನಿಸಹತ್ತಿತು. ಹುಡುಗಿ ಪರವಾಗಿಲ್ಲ. ಐದಡಿ ಆರಿಂಚಿನ ಸಪೂರ ಮೈಕಟ್ಟಿನ ಗೋಧಿ ಬಣ್ಣದ ಬಟ್ಟಲುಗಣ್ಣುಗಳ ಪುಟ್ಟ ತುಟಿಗಳ ಚೆಲುವೆ... ಹೌದು ಅವಳು ಚೆಲುವೆಯೇ.

ಇಷ್ಟಕ್ಕೂ ಯಾರಾದರೇನು? ರಾತ್ರಿಗಳಲ್ಲಿ ಮೈಕಾಯಿಸಿಕೊಳ್ಳಲು ನನಗೇನು ಅಂಥ ಚೆಲುವೆಯೇ ಬೇಕಿರಲಿಲ್ಲ. ಜರ್ಮನಿಯ ಈ ಕೊರೆವ ಚಳಿರಾತ್ರಿಗಳಲ್ಲಿ ಒಂದಿಷ್ಟು ರಾಗರಂಗು ಚೆಲ್ಲಿ ಒಂದೇ ಹಾಸಿಗೆಯಲ್ಲಿ ಮಲಗುವವಳಾದರೆ ಸಾಕು. ನಿಜ ಹೇಳಬೇಕೆಂದರೆ... ಈ ಹುಡುಗಿಯ ಆಕರ್ಷಕ ಮೈಮಾಟಕ್ಕೆ ನನ್ನೊಳಗೆ ಒಂದು ಹುರುಪು ಹಸಿವು ಶುರುವಾಗಿದ್ದು ಅವಳಿಗಿಂತ ಮುಂಚೆಯೆ. ಆದರೆ... ನನ್ನ ಉದ್ದೇಶಗಳನ್ನು ಅರ್ಥ ಮಾಡಿಸದೆ ನಾನು ಯಾವ ಹುಡುಗಿಯನ್ನೂ ಮುಟ್ಟುವುದಿಲ್ಲ. ಇದು ನನಗೆ ನಾನೇ ಮಾಡಿಕೊಂಡ ನಿಯಮ. ಅವಳ ಕಣ್ಣುಗಳು ಆಗಾಗ ನನ್ನನ್ನು ಸಂಧಿಸುತ್ತಿದ್ದುದ್ದನ್ನು ನೋಡಿ ಸ್ವಲ್ಪ ಧೈರ್ಯ ವಹಿಸಬೇಕೆನಿಸಿತು. ಮಾಮೂಲಾಗಿ ನಮ್ಮೆಲ್ಲರ ನಡುವೆ ಹರಿದಾಡುತ್ತಿದ್ದ 'ಹೈ', 'ಹಲೋ', 'ಗುಡ್ ಮಾರ್ನಿಂಗ್'ಗಳ ಬದಲಿಗೆ ಆ ದಿನ ಅವಳಿಗೆ 'ಹೈ ಸೆಕ್ಸಿ' ಎಂದು ಮೆಸೇಜಿಸಿದೆ. ಅವಳಿಂದ ಉತ್ತರವೇನೂ ಬರಲಿಲ್ಲ. ಲ್ಯಾಬಿನಲ್ಲಿ ಅವಳ ಮುಖಭಾವ ಗಮನಿಸಿದೆ. ಪ್ರಜ್ಞಾಪೂರ್ವಕ ನನ್ನನ್ನು ತಪ್ಪಿಸುತ್ತಿದ್ದಳು. ಓ! ನಾನಿನ್ನೂ ಸಮಯ ಕೊಡಬೇಕಾಗಿತ್ತೆನಿಸಿತು. ನಾನೂ ಅಷ್ಟೇ ಇನರ್ಟ್ ಆಗಿ ಉಳಿದುಬಿಟ್ಟೆ. ಒಂದೆರೆಡು ದಿನಗಳಲ್ಲಿ ಸರಿಯಾದಳು. ನಿನ್ನೆ ಸಂಜೆ ಲ್ಯಾಬ್ ಮುಗಿಸಿ ಮನೆಗೋಗುವಾಗ 'ವುಡ್ ಯು ಲೈಕ್ ಎ ಕಾಫಿ ವಿತ್ ಮಿ' ಎಂದು ಆಹ್ವಾನಿಸಿದೆ. ಒಂದು ನಿಮಿಷ ಗಲಿಬಿಲಿಗೊಂಡು ತತ್‌ಕ್ಷಣವೇ 'ಓ ಶ್ಯೂರ್' ಎಂದು ಬ್ಯಾಗು ಪರ್ಸುಗಳನ್ನೆತ್ತಿಕೊಂಡು ನನ್ನೊಡನೆ ನಡೆಯ ತೊಡಗಿದಳು.